# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು
## ಹೆಚ್.ಆರ್.ಸಿ ಸಂಖ್ಯೆ: 898/10/31/2021–(SB-III)
## ದಿನಾಂಕ: 28.03.2022
## ಉಪಸ್ಥಿತರು: ಶ್ರೀ ಆರ್.ಕೆ ದತ್ತ ಮಾನ್ಯ ಸದಸ್ಯರು

**ದೂರುದಾರರು:**
ಶ್ರೀ ಎ. ಚೆಲ್ಲಾರಾಮ್,
ಪವಿತ್ರ ಜ್ಯುವೆಲರ್ಸ್,
ನಂ.8/1, ಬೇಗೂರ ರಸ್ತೆ,
ಬೊಮ್ಮನಹಳ್ಳಿ, ಬೆಂಗಳೂರು: 68.
ದೂ: 9448538128.

**ಆದೇಶ**

ಶ್ರೀ ಚೆಲ್ಲಾರಾಮ್ ರವರು ಆಯೋಗಕ್ಕೆ ನೀಡಿರುವ ದೂರಿನಲ್ಲಿ, ಬೊಮ್ಮನಹಳ್ಳಿಯ ಬೇಗೂರು ರಸ್ತೆಯಲ್ಲಿ ದೂರುದಾರರು ಪವಿತ್ರ ಜ್ಯೂವೆಲರ್ಸ್ ಎಂಬ ಪದನಾಮವುಳ್ಳ ಆಭರಣದ ಅಂಗಡಿಯನ್ನು ನಡೆಸಿಕೊಂಡು ಬಂದಿದ್ದು, ದಿನಾಂಕ 07.03.2021 ರಂದು ಮಧ್ಯಾಹ್ನ 1:55 ರಿಂದ 02:15 ಸುಮಾರಿಗೆ ದೂರುದಾರರು ತಮ್ಮ ಅಂಗಡಿಯಲ್ಲಿದ್ದಾಗ, ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ ಹಾಗೂ 6 ರಿಂದ 7 ಪೊಲೀಸ್ ಸಿಬ್ಬಂದಿಗಳೊಂದಿಗೆ ಒಬ್ಬ ಮಹಿಳಾ ಪೊಲೀಸ್ ಸೇರಿದಂತೆ ಸಿವಿಲ್ ಡ್ರೆಸ್ಸ್‌ನಲ್ಲಿ ಬಂದಿದ್ದು, ಅದರಲ್ಲಿ ಒಬ್ಬ ಪೊಲೀಸ್ ಈ ಘಟನೆಯನ್ನು ಕ್ಯಾಮೇರಾದಲ್ಲಿ ರೆಕಾರ್ಡ್ ಮಾಡಲು ಪ್ರಾರಂಭಿಸಿದರು, ಅಂಗಡಿಯ ಡಿ.ವಿ.ಆರ್ ಅನ್ನು ತೆಗೆದುಕೊಂಡರು. ದೂರುದಾರರ, ಅವರ ಸಿಬ್ಬಂದಿಗಳ ಹಾಗೂ ಅಕ್ಕ–ಪಕ್ಕದ ಅಂಗಡಿಯವರ ಫೋನ್‌ಗಳನ್ನು ಕಸಿದುಕೊಂಡಿದ್ದು, ದೂರುದಾರರಿಗೆ ಯಾವುದೇ ಕಾರಣ ನೀಡದೇ ಅವರನ್ನು ಬಲವಂತವಾಗಿ ಠಾಣೆಗೆ ಕರೆದುಕೊಂಡು ಹೋಗಿ ದೂರುದಾರರ ಹಾಗೂ ಅವರ ಕುಟುಂಬದ ವಿವರಗಳನ್ನು ಕೇಳಿ ಬರೆದುಕೊಂಡು ಒಂದು ಬಿಳಿ ಹಾಳೆಯಲ್ಲಿ ದೂರುದಾರರ ಸಹಿ ಹಾಗೂ ಹೆಬ್ಬೆಟನ್ನು ಸಹ ಪಡೆದುಕೊಂಡಿರುತ್ತಾರೆಂದು ಆರೋಪಿಸಿದ್ದಾರೆ.

ಸದರಿ ದೂರಿನ ಪ್ರತಿಯನ್ನು ಆಯೋಗದ ಆರಕ್ಷಕ ಮಹಾನಿರೀಕ್ಷಕರವರಿಗೆ ವಿಚಾರಣೆ ಮಾಡಿ ವರದಿ ನೀಡುವಂತೆ ಆದೇಶಿಸಿದ್ದು, ದಿನಾಂಕ 30.04.2021 ರ ಪತ್ರದನ್ವಯ ಸದರಿಯವರ ವರದಿಯೊಂದಿಗೆ ಡಿ.ವೈ.ಎಸ್.ಪಿ. ರವರ ವರದಿ ಹಾಗೂ ಅಡಕಗಳನ್ನು ಸಲ್ಲಿಸಿರುತ್ತಾರೆ. ಆಯೋಗದ ಆರಕ್ಷಕ ಮಹಾನಿರೀಕ್ಷಕರವರ ವರದಿಯು ಕೆಳಕಂಡಂತಿರುತ್ತದೆ:–

> "ಪ್ರಕರಣದ ವಿಚಾರಣಾ ಕಾಲಾದಲ್ಲಿ ದೂರುದಾರರಾದ ಶ್ರೀ ಚೆಲ್ಲಾರಾಮ್ ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ 07–03–2021 ರಂದು ಮಧ್ಯಾಹ್ನ 1–55 ರಿಂದ 2–15

ಗಂಟೆ ಸಮಯದಲ್ಲಿ ಎರಡು ಇನೋವಾ ಕಾರಿನಲ್ಲಿ ಒಬ್ಬ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು 6–7 ಜನ ಸಿಬ್ಬಂದಿಗಳು ತಮ್ಮ ಅಂಗಡಿ ಬಳಿ ಬಂದು ಪಿ.ಎಸ್.ಐ. ರವರು ತನಗೆ ಕಾರಿನಲ್ಲಿ ಕುಳಿತುಕೊಳ್ಳುವಂತೆ ತಿಳಿಸಿದರು. ಆಗ ತಾನು ಕಾರಿನಲ್ಲಿ ಕುಳಿತುಕೊಳ್ಳದೇ ತನ್ನ ಅಂಗಡಿ ಒಳಗೆ ಹೋದಾಗ 5–6 ಜನ ಅಂಗಡಿ ಒಳಗೆ ಬಂದು ನೀವು ಠಾಣೆಗೆ ಬರಬೇಕು ಎಂದು ಕರೆದರು. ಇದನ್ನು ಪ್ರಶ್ನಿಸಿ ಏಕೆ ಬರಬೇಕು ಕುಳಿತುಕೊಂಡು ಮಾತನಾಡಿ ನೀವು ಯಾವ ಠಾಣೆಯಿಂದ ಬಂದಿರುತ್ತೀರಿ ಎಂದು ಕೇಳಿದೆನು. ಆಗ ಅವರು ಅದೆಲ್ಲಾ ನಿಮಗೆ ಬೇಕಾಗಿಲ್ಲಾ, ನೀವು ಠಾಣೆಗೆ ಬಂದರೆ ನಿಮಗೆ ಗೊತ್ತಾಗುತ್ತದೆ ಕೂಡಲೇ ಠಾಣೆಗೆ ಬನ್ನಿ ಎಂದು ಹೇಳಿ ಈಗ ನೀವು ಬರದಿದ್ದರೆ ನಿಮಗೆ ಬೇಡಿ ಹಾಕಿ ಕರೆದುಕೊಂಡು ಹೋಗಬೇಕಾಗುತ್ತದೆ ಎಂದು ಬೆದರಿಕೆ ಹಾಕಿದರು ಹಾಗೂ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದರು. ಇದಕ್ಕೆ ತಾನು ತನ್ನ ಮಗ ಬಂದ ನಂತರ ಬರುತ್ತೇನೆ ಎಂದು ಅವರಲ್ಲಿ ಮನವಿಮಾಡಿಕೊಂಡೆನು. ಇದನ್ನೆಲ್ಲಾ ವಿಡಿಯೋ ಮಾಡುತ್ತಿದ್ದ ತಮ್ಮ ಪಕ್ಕದ ಅಂಗಡಿಯ ಹುಡುಗ ರಮೇಶ್‌ನನ್ನು ಹಾಗೂ ತನ್ನನ್ನು ಬಲವಂತವಾಗಿ ಅವರ ಜೊತೆ ಕಾರಿನಲ್ಲಿ ಕೂರಿಸಿಕೊಂಡರು. ತನ್ನ ಸ್ನೇಹಿತ ಶ್ರೀ ಚಿಮ್ನಾರಾಮ್, ಮಂಗಲ್ ಜ್ಯುವೆಲ್ಲರ್ಸ್ ಅಂಗಡಿ ಮಾಲೀಕರನ್ನು ಸಹ ಇನ್ನೊಂದು ಕಾರಿನಲ್ಲಿ ಕೂರಿಸಿಕೊಂಡಿದ್ದರು. ನಂತರ ಪೋಲಿಸರು ತಮ್ಮ ಅಂಗಡಿಗೆ ಹೋಗಿ ಸಿಸಿ ಟಿವಿ ಕ್ಯಾಮರದ ಡಿವಿಆರ್‌ನ್ನು ತೆಗೆದುಕೊಂಡು ಬಂದರು. ನಂತರ ಅವರು ಮಧ್ಯಾಹ್ನ 03–00 ಗಂಟೆಗೆ ತನ್ನನ್ನು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಠಾಣೆಯಲ್ಲಿ ಪಿ.ಎಸ್.ಐ. ರವರು ಮತ್ತೆ ಅವಾಚ್ಯ ಶಬ್ದಗಳಿಂದ ಬೈಯ್ದು, ಒಂದು ರಿಜಿಸ್ಟರ್‌ನಲ್ಲಿ ತನ್ನ ಅಂಗಡಿಯ, ತನ್ನ ಕುಟುಂಬದ ವಿವರಗಳನ್ನು ಕೇಳಿ ಬರೆದುಕೊಂಡು ಒಂದು ಬಿಳಿ ಹಾಳೆಯ ಮೇಲೆ ತನ್ನಿಂದ ಸಹಿ ಪಡೆದು ಹೆಬ್ಬೆಟಿನ ಸಹಿಯನ್ನು ಸಹ ಪಡೆದುಕೊಂಡರು. ತನ್ನ ಮೊಬೈಲ್‌ಗಳನ್ನು ವಾಪಸ್ಸು ನೀಡಿ, ತನ್ನನ್ನು ಮತ್ತು ತನ್ನ ಪಕ್ಕದ ಅಂಗಡಿಯ ಹುಡುಗ ರಮೇಶ್‌ನನ್ನು ಮಧ್ಯಾಹ್ನ 3–45 ಗಂಟೆಗೆ ಠಾಣೆಯಿಂದ ಕಳುಹಿಸಿದರು. ತಾನು ವಾಪಸ್ಸು ಅಂಗಡಿಗೆ ಹೋದ ನಂತರ ಸಂಜೆ 5–00 ಗಂಟೆಗೆ ತನ್ನ ಸ್ನೇಹಿತ ಶ್ರೀ ಚಿಮ್ನಾರಾಮ್ ರವರು ತನ್ನ ಅಂಗಡಿ ಬಳಿ ಬಂದು ತನ್ನನ್ನು ಸಹ ಪೊಲೀಸರು ವಾಪಸ್ಸು ಕಳುಹಿಸಿದರು ಎಂದು ಹೇಳಿ ನಿಮ್ಮ ಅಂಗಡಿಯ ಡಿವಿಆರ್‌ನ್ನು ತನ್ನ ಬಳಿ ಕೊಟ್ಟಿದ್ದಾರೆ ಎಂದು ಹೇಳಿ ಅದನ್ನು ನನ್ನ ಬಳಿ ಕೊಟ್ಟರು. ತಾನು ಅದನ್ನು ಚೆಕ್ ಮಾಡಲಾಗಿ 3 ವರ್ಷಗಳಿಂದ ರೆಕಾರ್ಡ್ ಆಗಿದ್ದ ಎಲ್ಲಾ ಮಾಹಿತಿಯನ್ನು ಡಿಲೀಟ್ ಮಾಡಿರುತ್ತಾರೆಂದು ದೂರು ಹಾಗೂ ಹೇಳಿಕೆಯಲ್ಲಿ ನುಡಿದಿರುತ್ತಾರೆ.

ಸದರಿ ಪ್ರಕರಣದ ವಿಚಾರಣಾ ಕಾಲದಲ್ಲಿ ದೂರುದಾರರ ಮಗನಾದ ಶ್ರೀ ಲಲಿತ್ ಕುಮಾರ್ ರವರನ್ನು ವಿಚಾರಣೆ ಮಾಡಲಾಗಿ ಅವರ ತಂದೆಯವರ ಹೇಳಿಕೆಗೆ ಅನುಗುಣವಾಗಿ ನುಡಿದಿರುತ್ತಾರೆ.

ಈ ಪ್ರಕರಣದ ವಿಚಾರಣಾ ಕಾಲದಲ್ಲಿ ಸಾಕ್ಷಿದಾರರಾದ ಶ್ರೀ ರಮೇಶ್ ರಾಥೋಡ್ ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ 07–03–2021 ರಂದು ನಾನು ನಮ್ಮ ಅಂಗಡಿಯಲ್ಲಿ ಇರುವಾಗ ಮಧ್ಯಾಹ್ನ ಸುಮಾರು 01–45 ಗಂಟೆಯ ಸಮಯದಲ್ಲಿ ಸಮವಸ್ತ್ರದಲ್ಲಿದ್ದ ಒಬ್ಬರು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಸಾದಾ ಉಡುಪಿನಲ್ಲಿದ್ದ 07–08 ಜನ ಪೊಲೀಸರು ಬೇಡಿ ಹಾಕಿರುವ ಒಬ್ಬ ವ್ಯಕ್ತಿಯೊಂದಿಗೆ ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಯ ಒಳಗೆ ಹೋಗಿ ಸದರಿ ಅಂಗಡಿಯ ಮಾಲೀಕರಾದ ಶ್ರೀ ಚೆಲ್ಲಾರಾಮ್ ರವರನ್ನು ವಿಚಾರಣೆ ಮಾಡಿ ಅವರೊಂದಿಗೆ ಕರೆದುಕೊಂಡು ಹೋಗಲು ಅಂಗಡಿಯಿಂದ

ಹೊರಗೆ ಕರೆದುಕೊಂಡು ಬಂದಿದ್ದು, ಆ ಸಮಯದಲ್ಲಿ ನಾನು ವಿಡಿಯೋ ಮಾಡುತ್ತಿದ್ದಾಗ ನನ್ನ ಮೊಬೈಲ್‌ಅನ್ನು ತೆಗೆದುಕೊಂಡು ಅವರೊಂದಿಗೆ ನನ್ನನ್ನೂ ಸಹ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಠಾಣೆಯಲ್ಲಿ ಶ್ರೀ ಚೆಲ್ಲಾರಾಮ್ ರವರನ್ನು ವಿಚಾರಣೆ ಮಾಡಿ ನಂತರ ಒಂದು ರಿಜಿಸ್ಟರ್‌ನಲ್ಲಿ ನನ್ನ ಹಾಗೂ ಶ್ರೀ ಚೆಲ್ಲಾರಾಮ್ ರವರ ಅಂಗಡಿಯ ಹಾಗೂ ಕುಟುಂಬದ ವಿವರಗಳನ್ನು ಕೇಳಿ ಬರೆದುಕೊಂಡು, ನಂತರ ಬಿಳಿ ಹಾಳೆಯ ಮೇಲೆ ಶ್ರೀ ಚೆಲ್ಲಾರಾಮ್ ರವರ ಸಹಿ ಹಾಗೂ ಹೆಬ್ಬೆಟ್ಟಿನ ಸಹಿಯನ್ನು ಪಡೆದುಕೊಂಡರು. ನಂತರ ಅವರನ್ನು ನನ್ನ ಜೊತೆ ನಿಲ್ಲಿಸಿ ಒಂದು ಫೋಟೋ ತೆಗೆದುಕೊಂಡರು. ನಮ್ಮನ್ನು ಠಾಣೆಯಿಂದ ಬಿಡುಗಡೆ ಮಾಡಿ ಪೊಲೀಸರೇ ಒಂದು ಕಾರಿನಲ್ಲಿ ನಮ್ಮನ್ನು ನಮ್ಮ ಅಂಗಡಿಯ ಬಳಿಗೆ ಕಳುಹಿಸಿಕೊಟ್ಟರು ಎಂದು ನುಡಿದಿರುತ್ತಾರೆ.

ದೂರುದಾರರ ಆರೋಪಗಳಿಗೆ ಸಂಬಂಧಿಸಿದಂತೆ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀ ನಾರಾಯಣಿ ರವರನ್ನು ಹಾಗೂ ಸಿಬ್ಬಂದಿಗಳಾದ ಶ್ರೀ.ಪ್ರವೀಣ್ ಹೆಚ್‌ಸಿ–10234, ಶ್ರೀ.ಪ್ರಕಾಶ್, ಪಿಸಿ–13007, ಶ್ರೀ.ಹರೀಶ್ ಪಿಸಿ–12618, ಶ್ರೀ.ಜಯಚಂದ್ರ ಪಿಸಿ–13049 ಶ್ರೀ. ಹೆಚ್.ಸಿ.ಅರುಣ್‌ಕುಮಾರ್ ಪಿಸಿ–19728 ಹಾಗೂ ಶ್ರೀಮತಿ. ರೇಣುಕ, ಮಪಿಸಿ–14780 ರವರುಗಳನ್ನು ವಿಚಾರಣೆ ಮಾಡಲಾಗಿ ಉಪ್ಪಾರಪೇಟೆ ಪೊಲೀಸ್ ಠಾಣೆಯ ಮೊ.ಸಂ.66/2018, ಕಲಂ: 379 ಐಪಿಸಿ ಪ್ರಕರಣದಲ್ಲಿ ಕಳುವಾಗಿದ್ದ ಒಟ್ಟು 240 ಗ್ರಾಂ ತೂಕದ ಚಿನ್ನದ ಒಡವೆಗಳನ್ನು ಆರೋಪಿ ಶಬ್ಬೀರ್ ಹಾಗೂ ಆತನ ಸ್ನೇಹಿತನಾದ ನಾಗರಾಜು ಎಂಬುವನು ಸೇರಿಕೊಂಡು 2018 ನೇ ಸಾಲಿನ ಮಾರ್ಚ್ ತಿಂಗಳಿನಲ್ಲಿ ಕಳುವು ಮಾಡಿ, ಅದೇ ತಿಂಗಳಿನಲ್ಲಿ ಸದರಿ ಒಡವೆಗಳನ್ನು ಬೊಮ್ಮನಹಳ್ಳಿಯಲ್ಲಿರುವ ಮಂಗಲ್ ಜ್ಯೂವೆಲ್ಲರ್ಸ್ ಹಾಗೂ ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಗಳಿಗೆ ಮಾರಾಟ ಮಾಡಿರುವುದಾಗಿ ಆತನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದ್ದರಿಂದ, ಪಿಎಸ್‌ಐ ರವರು ಅವರ ಠಾಣೆಯ ಪಿಐ ರವರ ಗಮನಕ್ಕೆ ತಂದು ದಿನಾಂಕ: 07.03.2021 ರಂದು ಮಧ್ಯಾಹ್ನ ಸುಮಾರು 1–45 ಗಂಟೆ ಸದರಿ ಆರೋಪಿಯೊಂದಿಗೆ ಹಾಗೂ ಸಿಬ್ಬಂದಿಗಳೊಂದಿಗೆ ಎರಡು ಇನ್ನೋವಾ ಕಾರ್‌ಗಳಲ್ಲಿ ಬೆಂಗಳೂರು ನಗರ, ಬೊಮ್ಮನಹಳ್ಳಿ, ಬೇಗೂರು ಮುಖ್ಯರಸ್ತೆಯಲ್ಲಿರುವ ಮಂಗಲ್ ಜ್ಯೂವೆಲ್ಲರ್ಸ್ ಅಂಗಡಿಯ ಬಳಿಗೆ ಹಾಗೂ ಮಧ್ಯಾಹ್ನ ಸುಮಾರು 02–00 ಗಂಟೆಗೆ ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಯ ಬಳಿಗೆ ಹೋಗಿ ಸದರಿ ಅಂಗಡಿಗಳ ಮಾಲೀಕರಾದ ಶ್ರೀ ಚಿಮ್ನಾರಾಮ್ ರವರು ಹಾಗೂ ಶ್ರೀ ಚೆಲ್ಲಾರಾಮ್ ರವರುಗಳನ್ನು ಈ ಬಗ್ಗೆ ವಿಚಾರಿಸಲಾಗಿ ಅವರು ಆರೋಪಿ ಕಡೆಯಿಂದ ಯಾವುದೇ ಚಿನ್ನದ ಒಡವೆಗಳನ್ನು ಖರೀದಿಸಿರುವುದಿಲ್ಲವೆಂದು ತಿಳಿಸಿದ್ದರಿಂದ ವಿಚಾರಣೆಗಾಗಿ ಅವರ ಅಂಗಡಿಗಳ ಡಿವಿಆರ್‌ಗಳನ್ನು ಹಾಗೂ ಅವರುಗಳನ್ನು ಪಿಎಸ್‌ಐ ಹಾಗೂ ಸಿಬ್ಬಂದಿಗಳು ಅವರ ಜೊತೆಯಲ್ಲಿ ಕರೆದುಕೊಂಡು ಠಾಣೆಗೆ ಬಂದು ಪಿಐ ರವರ ಮುಂದೆ ಹಾಜರುಪಡಿಸಿದ್ದು, ಪಿಐ ರವರ ಸೂಚನೆಯನ್ವಯ ಪಿಎಸ್‌ಐ ಶ್ರೀ ನಾರಾಯಣಿ ರವರು ಸದರಿಯವರುಗಳನ್ನು ಕಲಂ: 169 ಸಿಆರ್‌ಪಿಸಿ ರೀತ್ಯಾ ವಿಚಾರಣೆ ಮಾಡಿ ಅವರ ಪಕ್ಕದ ಅಂಗಡಿಯ ಮಾಲೀಕರಾದ ಶ್ರೀ ರಮೇಶ್ ರವರೊಂದಿಗೆ ಠಾಣೆಯಿಂದ ಕಳುಹಿಸಿಕೊಟ್ಟಿರುವುದಾಗಿ ಹಾಗೂ ಸದರಿಯವರುಗಳ ಅಂಗಡಿಗಳಿಂದ ತನಿಖೆಗಾಗಿ ತಂದಿದ್ದ ಎರಡೂ ಡಿವಿಆರ್‌ಗಳಿಗೆ ಅಳವಡಿಸಿದ್ದ ಪಾಸ್‌ವರ್ಡ್‌ಗಳನ್ನು ನೀಡಲು ನಿರಾಕರಿಸಿದ್ದರಿಂದ ಸದರಿ ಡಿವಿಆರ್‌ಗಳನ್ನು ಶ್ರೀ.ಚಿಮ್ನಾರಾಮ್ ರವರೊಂದಿಗೆ ಕಳುಹಿಸಿಕೊಟ್ಟಿರುತ್ತಾರೆಂದು ಹಾಗೂ ಶ್ರೀ.ಚೆಲ್ಲಾರಾಮ್ ಹಾಗೂ ಶ್ರೀ.ಚಿಮ್ನಾರಾಮ್

ರವರುಗಳನ್ನು ಠಾಣೆಗೆ ವಿಚಾರಣೆಗಾಗಿ ಕರೆತಂದಿದ್ದ ಸಂದರ್ಭದಲ್ಲಿ ಅವರ ಠಾಣೆಯ ಪಿಐ ರವರ ಸೂಚನೆಯಂತೆ ಕಲಂ: 169 ಸಿಆರ್‌ಪಿಸಿ ರೀತ್ಯಾ ವಿಚಾರಣೆ ಮಾಡುವ ಸಮಯದಲ್ಲಿ ಠಾಣಾ ಪಿಎಸ್‌ಆರ್‌ನ ಕಾಲಂ ನಂ.04 ರಲ್ಲಿ ಸದರಿಯವರುಗಳ ಹೆಸರು, ವಿಳಾಸ, ಅವರ ಸಂಬಂಧಿಕರ ಹೆಸರುಗಳನ್ನು ಹಾಗೂ ಕಾಲಂ ನಂ.06 ರಲ್ಲಿ ಸದರಿಯವರುಗಳ ಸಹಿ ಹಾಗೂ ಹೆಬ್ಬೆಟ್ಟಿನ ಸಹಿಗಳನ್ನು ಪಡೆಯಲಾಗಿದ್ದು, ದೂರುದಾರರು ಅದನ್ನೇ ತಪ್ಪಾಗಿ ಅರ್ಥೈಸಿಕೊಂಡು ಬಿಳಿ ಹಾಳೆಯ ಮೇಲೆ ಅವರ ಸಹಿ ಹಾಗೂ ಹೆಬ್ಬೆಟ್ಟಿನ ಸಹಿಯನ್ನು ಪಡೆದಿರುವುದಾಗಿ ಅವರ ದೂರಿನಲ್ಲಿ ಪಿಎಸ್‌ಐ ಶ್ರೀ ನಾರಾಯಣಿ ಹಾಗೂ ಸಿಬ್ಬಂದಿಗಳ ವಿರುದ್ದ ಸುಳ್ಳು ಆರೋಪ ಮಾಡಿರುತ್ತಾರೆ. ದೂರುದಾರರು ಅವರ ದೂರಿನಲ್ಲಿ ಪಿಎಸ್‌ಐ ಶ್ರೀ ನಾರಾಯಣಿ ಹಾಗೂ ಅವರ ಸಿಬ್ಬಂದಿಗಳ ವಿರುದ್ದ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದು ನುಡಿದಿರುತ್ತಾರೆ.

ಉಪ್ಪಾರಪೇಟೆ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಶಿವಸ್ವಾಮಿ ರವರನ್ನು ವಿಚಾರಣೆ ಮಾಡಲಾಗಿ ನಮ್ಮ ಠಾಣೆಯ ಮೊ.ಸಂ.66/2018 ಕಲಂ: 379 ಐಪಿಸಿ ಪ್ರಕರಣದಲ್ಲಿ ಕಳುವಾಗಿದ್ದ ಚಿನ್ನದ ಒಡವೆಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಲುವಾಗಿ ಆರೋಪಿ ಶಬ್ಬೀರ್‌ನೊಂದಿಗೆ ದಿನಾಂಕ: 07.03.2021 ರಂದು ನಮ್ಮ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ.ನಾರಾಯಣಿ ರವರು ಹಾಗೂ ಸಿಬ್ಬಂದಿಗಳು ಬೊಮ್ಮನಹಳ್ಳಿಯಲ್ಲಿರುವ ಮಂಗಲ್ ಜ್ಯೂವೆಲ್ಲರ್ಸ್ ಹಾಗೂ ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಗಳ ಬಳಿ ಹೋಗಿ ಸದರಿ ಅಂಗಡಿಗಳ ಮಾಲೀಕರುಗಳಾದ ಶ್ರೀ ಚಿಮ್ನಾರಾಮ್ ಹಾಗೂ ಶ್ರೀ ಚೆಲ್ಲಾರಾಮ್ ರವರುಗಳನ್ನು ಅವರ ಅಂಗಡಿಗಳಲ್ಲಿದ್ದ ಡಿವಿಆರ್‌ಗಳ ಸಮೇತ ವಿಚಾರಣೆಗಾಗಿ ಅದೇ ದಿನ ಮಧ್ಯಾಹ್ನ ಸುಮಾರು 03–05 ಗಂಟೆಯ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾನು ಸದರಿಯವರುಗಳನ್ನು ವಿಚಾರಣೆ ಮಾಡಲಾಗಿ ಸದರಿಯವರುಗಳು ಆರೋಪಿ ಶಬ್ಬೀರ್‌ನ ಕಡೆಯಿಂದ ಕಳುವು ಮಾಲುಗಳನ್ನು ಸ್ವೀಕರಿಸಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಮೇಲ್ನೋಟಕ್ಕೆ ಕಂಡು ಬಾರದೇ ಇದ್ದ ಕಾರಣ ಹಾಗೂ ಡಿವಿಆರ್‌ಗಳಿಗೆ ಅಳವಡಿಸಿದ್ದ ಪಾಸ್‌ವರ್ಡ್‌ಗಳನ್ನು ನೀಡದೇ ಇದ್ದ ಕಾರಣ ನನ್ನ ಸೂಚನೆಯನ್ವಯ ಪಿಎಸ್‌ಐ ಶ್ರೀ ನಾರಾಯಣಿ ರವರು ಸದರಿಯವರುಗಳನ್ನು ಕಲಂ: 169 ಸಿ.ಆರ್.ಪಿ.ಸಿ ರೀತ್ಯಾ ವಿಚಾರಣೆ ಮಾಡಿ ಠಾಣೆಯಿಂದ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಡಿವಿಆರ್‌ಗಳಲ್ಲಿದ್ದ ಯಾವುದೇ ಮಾಹಿತಿಯನ್ನು ನಾವು ಡಿಲೀಟ್ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ್ಪಾರಪೇಟೆ ಪೊಲೀಸ್ ಠಾಣೆಯ ದಾಖಲಾತಿಗಳನ್ನು ಪರಿಶೀಲಿಸಲಾಗಿ ಉಪ್ಪಾರಪೇಟೆ ಪೊಲೀಸ್ ಠಾಣೆಯ ಮೊ.ಸಂ.115/2020 ಕಲಂ: 457, 380 ಐಪಿಸಿ ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ ಶಬ್ಬೀರ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಯ ಮೊ.ಸಂ. 66/2018 ಕಲಂ: 379 ಐಪಿಸಿ ಪ್ರಕರಣದಲ್ಲಿ ಕಳುವು ಮಾಡಿದ್ದ ಚಿನ್ನದ ಒಡವೆಗಳನ್ನು ಬೊಮ್ಮನಹಳ್ಳಿಯಲ್ಲಿರುವ ಪವಿತ್ರ ಜ್ಯೂವೆಲ್ಲರ್ಸ್ ಹಾಗೂ ಮಂಗಲ್ ಜ್ಯೂವೆಲ್ಲರ್ಸ್ ಅಂಗಡಿಗಳಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಸದರಿ ಮಾಲುಗಳನ್ನು ಅಮಾನತ್ತುಪಡಿಸಿಕೊಳ್ಳಲು ಪಿಎಸ್‌ಐ ಶ್ರೀ ನಾರಾಯಣಿ ರವರು ಹಾಗೂ ಅವರ ಠಾಣೆಯ ಸಿಬ್ಬಂದಿಗಳು ಆರೋಪಿಯೊಂದಿಗೆ ದಿನಾಂಕ: 07.03.2021 ರಂದು 13–10 ಗಂಟೆಗೆ ಠಾಣೆಯಿಂದ ಬೊಮ್ಮನಹಳ್ಳಿಗೆ ಹೋಗುತ್ತಿರುವುದಾಗಿ ಠಾಣಾ ದಿನಚರಿಯಲ್ಲಿ

ನಮೂದಿಸಿರುತ್ತಾರೆ. ನಂತರ ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಯ ಮಾಲೀಕರಾದ ಶ್ರೀ ಚೆಲ್ಲಾರಾಮ್ ರವರನ್ನು ಹಾಗೂ ಮಂಗಲ್ ಜ್ಯೂವೆಲ್ಲರ್ಸ್ ಅಂಗಡಿಯ ಮಾಲೀಕರಾದ ಶ್ರೀ ಚಿಮ್ನಾರಾಮ್ ರವರುಗಳನ್ನು ದಿನಾಂಕ: 07.03.2021 ರಂದು 15–05 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಪಿಐ ರವರ ಸೂಚನೆ ಮೇರೆಗೆ ಕಲಂ: 169 ಸಿಆರ್‌ಪಿಸಿ ರೀತ್ಯಾ ವಿಚಾರಣೆ ಮಾಡಿ, ಠಾಣಾ ಪಿಎಸ್‌ಆರ್‌ನಲ್ಲಿ ನಮೂದಿಸಿ, ನಂತರ 15–35 ಗಂಟೆಗೆ ಠಾಣೆಯಿಂದ ಬಿಡುಗಡೆ ಮಾಡಿ ಕಳುಹಿಸಿಕೊಟ್ಟಿರುವುದಾಗಿ ಠಾಣಾ ದಿನಚರಿಯಲ್ಲಿ ನಮೂದಿಸಿರುವುದು ಕಂಡು ಬಂದಿರುತ್ತದೆ.

ಈ ಪ್ರಕರಣದ ವಿಚಾರಣಾ ಕಾಲದಲ್ಲಿ ಸಾಕ್ಷೀದಾರರಾದ ಶ್ರೀ ರಮೇಶ್ ರಾಥೋಡ್ ರವರು ಹಾಜರುಪಡಿಸಿರುವ ವಿಡಿಯೋಕ್ಲಿಪ್‌ಅನ್ನು ಪರಿಶೀಲಿಸಲಾಗಿ ಸದರಿ ವಿಡಿಯೋ ಕ್ಲಿಪ್‌ನಲ್ಲಿ ಒಬ್ಬರು ಪೊಲೀಸ್ ಕಾನ್ಸ್‌ಟೇಬಲ್ ಬೇಡಿ ಹಾಕಿರುವ ಒಬ್ಬ ವ್ಯಕ್ತಿಯನ್ನು ಪವಿತ್ರ ಜ್ಯೂವೆಲ್ಲರ್ಸ್ ಅಂಗಡಿಯ ಒಳಗಡೆಯಿಂದ ಹೊರಕ್ಕೆ ಕರೆದುಕೊಂಡು ಬರುತ್ತಿರುವುದು ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯ ವರದಿಯೊಂದಿಗೆ ಈ ಹೆಚ್.ಆರ್.ಸಿ ಪ್ರಕರಣದ ವಿಚಾರಣಾ ಕಾಲದಲ್ಲಿ ದಾಖಲಿಸಿದ ಹೇಳಿಕೆ ಮತ್ತು ಸಂಗ್ರಹಿಸಿದ ದಾಖಲಾತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ."

ಸದರಿ ವರದಿಯನ್ನು ದೂರುದಾರರ ಅಭಿಪ್ರಾಯಕ್ಕೆ ಕಳುಹಿಸಿದ್ದು, ಅವರ ಅಭಿಪ್ರಾಯದಲ್ಲಿ ಉಪ್ಪಾರಪೇಟೆ ಪೊಲೀಸ್ ಸಿಬ್ಬಂದಿಗಳು ಆಯೋಗದ ತನಿಖಾ ವಿಭಾಗದಲ್ಲಿ ನೀಡಿರುವ ಹೇಳಿಕೆಗಳು ಸುಳ್ಳು ಹಾಗೂ ಸತ್ಯಕ್ಕೆ ದೂರವಾದವೆಂದು ಹಾಗೂ ಇದನ್ನು ತಿರಸ್ಕರಿಸುತ್ತೇನೆಂದು ಹಾಗೂ ತಾನು ನೀಡಿರುವ ದೂರಿನ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ದೂರುದಾರರು ನೀಡಿರುವ ಅಭಿಪ್ರಾಯನ್ನು ಪರಿಶೀಲಿಸಲಾಗಿ, ಮುಂದಿನ ವಿಚಾರಣೆ ನಡೆಸುವುದು ಸೂಕ್ತ ಎಂದು ತಿಳಿದು, ದೂರುದಾರರಿಗೆ, ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ; ಶ್ರೀ ಪ್ರವೀಣ್, ಹೆಚ್.ಸಿ–10234; ಶ್ರೀ ಪ್ರಕಾಶ್ ಪಿ.ಸಿ–13007; ಶ್ರೀ ಹರೀಶ್ ಪಿ.ಸಿ12618; ಶ್ರೀ ಜಯಚಂದ್ರ ಪಿ.ಸಿ–13049 ಮತ್ತು ಶ್ರೀ ಹೆಚ್.ಸಿ. ಅರುಣ್ ಕುಮಾರ್, ಪಿ.ಸಿ –19728 ರವರುಗಳಿಗೆ ದಿನಾಂಕ 29.11.2021 ರ ಮಧ್ಯಾಹ್ನ 12.00 ಘಂಟೆಗೆ ಆಯೋಗದ ಮುಂದೆ ಹಾಜರಾಗಲು ಪಿ.ಎಚ್.ಆರ್ ಆಕ್ಟ್ 1993 ಕಲಂ 13(1)(a) ರ ಅಡಿ ನೋಟಿಸ್ ಜಾರಿ ಮಾಡಿದ್ದು, ಅದರಂತೆ ದಿನಾಂಕ 29.11.2021 ರಂದು ಸದರಿಯವರುಗಳು ಆಯೋಗದ ಮುಂದೆ ಹಾಜರಾಗಿ, ದೂರುದಾರರ ಹಾಗೂ ಅಂದಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಐ.ಡಿ) ರವರುಗಳು ಅವರ ಹೇಳಿಕೆಗಳನ್ನು ನೀಡಿರುತ್ತಾರೆ. ಮುಂದುವರೆದು, ಪ್ರಕರಣದ ಘಟನೆಯ ಬಗ್ಗೆ ಆಯೋಗದ ಮುಂದೆ ಹಾಜರಾಗಿದ್ದ ಪೊಲೀಸ್ ಸಿಬ್ಬಂದಿಯವರನ್ನು ವಿಚಾರಣೆ ಮಾಡಲಾಗಿರುತ್ತದೆ.

ದಿನಾಂಕ 29.11.2021 ರಂದು ಆಯೋಗದ ಮುಂದೆ ಅಂದಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಐ.ಡಿ)ರವರು ನೀಡಿರುವ ಹೇಳಿಕೆ ಕೆಳಕಂಡಂತಿದೆ:–

> "ನಾನು ನವೆಂಬರ್ 2016 ರಿಂದ ಮೇ 2021ವರೆಗೂ ಉಪ್ಪಾರ್ ಪೇಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್‌ಇನ್ಸ್‌ಸೆಕ್ಟರ್ ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 7/3/2021 ರಂದು ನಮ್ಮ ಪ್ರಕರಣದ ಮೊ.ಸ. 115/2020 ರ ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ ಶಬೀರ್, ಈತ ತಾನು ಕಳವು ಮಾಡಿದ ಬಂಗಾರದ ಒಡವೆಗಳ ಪೈಕಿ ಕೆಲವು ಒಡವೆಗಳನ್ನು ಮಂಗಲ್ ಜೂವೆಲರ್ಸ್ ಮತ್ತು ಕೆಲವು ಒಡವೆಗಳನ್ನು ಪವಿತ್ರ ಜೂವೆಲರ್ಸ್ ರಲ್ಲಿ ಮಾರಾಟ ಮಾಡಿರುವುದಾಗಿ ಹಾಗೂ ಅಲ್ಲಿಗೆ ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿರುತ್ತಾನೆ. ಈ ಬಗ್ಗೆ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ತಿಳಿಸಿ ಅಪರಾಧ ವಿಭಾಗದ ಸಿಬ್ಬಂದಿಯವರೊಂದಿಗೆ ಆರೋಪಿಯನ್ನು ಕರೆದು ಕೊಂಡು ಆತ ಹೇಳಿದ ಸ್ಥಳಕ್ಕೆ ನಾವು ಹೋದೆವು. ಆ ದಿನ ನಾವು ಯೂನಿಫಾರ್ಮ್‌ನಲ್ಲೆ ಇದ್ದೆವು. ಮೊದಲಿಗೆ ಆತ ಮಂಗಲ್ ಜೂವೆಲರ್ಸ್ ನಲ್ಲಿ ಮಾರಾಟ ಮಾಡಿರುವುದಾಗಿ ಅಂಗಡಿಯನ್ನು ತೋರಿಸಿದ ಮೇರೆಗೆ, ನಾವು ಆತನನ್ನು ಅಂಗಡಿಗೆ ಕರೆದು ಕೊಂಡು ಹೋದಾಗ, ಅಂಗಡಿಯ ಮಾಲೀಕರಾದ ಚಿಮ್ನಾರಾಮ್ ರವರು ಅಂಗಡಿಯಲ್ಲಿ ಇದ್ದರು. ಆಗ 3 ರಿಂದ 4 ಕಸ್ಟಮರ್ಸ್ ಸಹ ಇದ್ದರು. ನಂತರ ಚಿಮ್ನಾರಾಮ್‌ರವರು ಕಸ್ಟಮರ್ಸ್‌ಗೆ "ನೀವು ಆಮೇಲೆ ಬನ್ನಿ" ಎಂದು ಹೇಳಿದರು. ಕಸ್ಟಮರ್ಸ್ ಹೋದ ನಂತರ ಕೂತುಕೊಳ್ಳಿ ಮಾತಾಡೋಣ ಎಂದು ಹೇಳಿದರು. ಆಗ ನಾನು ಆರೋಪಿಯನ್ನು ತೋರಿಸಿ, ಆರೋಪಿ ಹೇಳಿದ್ದನ್ನು ಚಿಮ್ನಾರಾಮ್‌ರವರಿಗೆ ಹೇಳಿದೆ, ಅದಕ್ಕೆ ಅವರು ಗೊತ್ತಿಲ್ಲ ಎಂದು ಹೇಳಿದರು. ಆಗ ಚಿಮ್ನಾರಾಮ್ ರವರಿಗೆ ನೋಟೀಸನ್ನು ಜಾರಿ ಮಾಡಿದೆ ಅವರು ಅದನ್ನು ಸ್ವೀಕರಿಸಿದರು. ಸ್ವೀಕರಿಸಿದ ನಂತರ, ಆರೋಪಿ ಕಳವು ಮಾಡಿರುವ ಒಡವೆಗಳನ್ನು ನಾನು ತೆಗೆದುಕೊಂಡಿರುವುದಿಲ್ಲವೆಂದು ಹೇಳಿದ್ದು, ಅದಕ್ಕೆ ನಾನು ನಮ್ಮ ಮೇಲಾಧಿಕಾರಿಗಳ ಹತ್ತಿರ ಹೇಳಿ ಎಂದು ತಿಳಿಸಿದೆ. ಚಿಮ್ನಾರಾಮ್‌ರವರು ಅಂಗಡಿಯಲ್ಲಿ ಇದ್ದಾಗಲೇ, ಡಿವಿಆರ್‌ನ್ನು ಅವರ ಅನುಮತಿಯಿಂದ ಚೆಕ್ ಮಾಡಲಿಕ್ಕೆ ತೆಗೆದುಕೊಂಡಿರುತ್ತೇವೆ. ನಂತರ ಅವರನ್ನು ಕೂರಿಸಿಕೊಂಡು, ಆರೋಪಿಯು, ಪವಿತ್ರ ಜೂವೆಲರ್ಸ್ ಅಂಗಡಿಯನ್ನು ತೋರಿಸಿದಕ್ಕೆ ಆರೋಪಿ ಒಟ್ಟಿಗೆ ಪವಿತ್ರ ಜೂವೆಲರ್ಸ್ ಅಂಗಡಿಗೆ ಹೋದೆವು. ಅಂಗಡಿಯಲ್ಲಿ ಶ್ರೀ ಚೆಲ್ಲಾರಾಮ್ ಕುಳಿತ್ತಿದ್ದರು, ಅವರಿಗೆ ನನ್ನ ಪರಿಚಯ ಮಾಡಿಕೊಂಡು ಆರೋಪಿಯನ್ನು ತೋರಿಸಿ, ಆರೋಪಿ ಹೇಳಿದ್ದನ್ನು ತಿಳಿಸಿದೆ. ನಂತರ ಅಂಗಡಿಯ ಮಾಲೀಕರು ಕಾಲಿನ ಮೇಲೆ ಕಾಲನ್ನು ಹಾಕಿಕೊಂಡು "ಬಾ ಗುರು ಕೂತ್ಕೊಂಡು ಮಾತಡೋಣ" ಎಂದು ಹೇಳಿದರು. "ನಾನು ಅಸೋಸಿಯಷನ್ ಲೀಡರ್ ಇದ್ದೇನೆ ಕುತ್ಕೋ ಬಾ ಗುರು ಮಾತಡೋಣ" ಅಂತ ಹೇಳಿದರು. ನಂತರ ಯಾರಿಗೋ ಫೋನ್ ಮಾಡಿ ನಮ್ಮ ಎಮ್‌ಎಲ್‌ಎ ಮಾತಾಡ್ತಾರೆ ಮಾತಾಡಿ ಅಂತ ಹೇಳಿದ್ದರು, ಹೇಳಿದ್ ಮೇಲೆ ಫೋನ್ ಕೊಡದೆ "ಎಮ್‌ಎಲ್‌ಎರವರಿಗೆ ನಿಮ್ಮ ಜೊತೆ ಮಾತಾಡ್‌ಲ್ವಂತೆ" ಎಂದು ಹೇಳಿ ಫೋನ್ ಡಿಸ್‌ಕನೆಕ್ಟ್ ಮಾಡಿದರು. ನಂತರ ಮತ್ತೊಂದು ಫೋನ್ ಮಾಡಿ ನಮ್ಮ ಏರಿಯಾ ಎಮ್‌ಎಲ್‌ಎ ಮಾತಡ್ತಾರೆ ಎಂದು ಹೇಳಿ ನನಗೆ ಫೋನ್ ಕೊಟ್ಟರು. ನಂತರ ಫೋನ್ ತೆಗೆದುಕೊಂಡು ಮಾತಾಡಿ ವಿಚಾರ ತಿಳಿಸಿದೆ. ಎಮ್‌ಎಲ್‌ಎ ಸತೀಶ್‌ರೆಡ್ಡಿ ರವರು "ಅವರು ಆ ರೀತಿ ಕಳವು ಮಾಡಿರುವ ಒಡವೆಗಳನ್ನು ತೆಗೆದುಕೊಳ್ಳುವುದಿಲ್ಲ" ಎಂದು ಹೇಳಿದರು. ಅದಕ್ಕೆ ನಾನು ಅವರು ಠಾಣೆಗೆ ಬಂದು

> ಪೊಲೀಸ್ ಇನ್ಸ್‌ಪೆಕ್ಟರ್ ರವರ ಬಳಿ ತಿಳಿಸಲಿ ಎಂದು ಹೇಳಿದೆ. ಶ್ರೀ ಚೆಲ್ಲಾರಾಮ್ ರವರಿಗೆ ನೋಟೀಸ್ ಕೊಟ್ಟಿದ್ದು ಅವರು ನೋಟೀಸ್‌ನ್ನು ತಿರಸ್ಕರಿಸಿದರು. ಆರೋಪಿಯು ಅವರ ಅಂಗಡಿಗೆ ಬಂದಿದ್ದಾರೆಯೋ ಅಥವಾ ಇಲ್ಲವೋ ಎಂದು ಪರಿಶೀಲಿಸಲು ಡಿವಿಆರ್‌ನ್ನು ಕೇಳಿದಾಗ, ಶ್ರೀ ಚೆಲ್ಲಾರಾಮ್‌ರವರ ಮಗ ಡಿವಿಆರ್‌ನ್ನು ತೆಗೆದು ಕೊಟ್ಟರು. ನಂತರ ಚೆಲ್ಲಾರಾಮ್ ರವರು ಸಹ ನಮ್ಮ ಜೊತೆ ಬಂದರು. ನಂತರ, ನಾವು ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಅಲ್ಲಿ ಹಾಜರಿದ್ದ ಹೆಚ್.ಸಿ ಶ್ರೀ ಉಮೇಶ್‌ರವರಿಗೆ ಇಂತ ಅಂಗಡಿಯಿಂದ ಇಂತ ವ್ಯಕ್ತಿಗಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ತಿಳಿಸಿ, ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಪೊಲೀಸ್ ಇನ್ಸ್‌ಪೆಕ್ಟರ್ ಸಮಕ್ಷಮ ಹಾಜರು ಪಡಿಸಿದೆವು. ಪೊಲೀಸ್ ಇನ್ಸ್‌ಪೆಕ್ಟರ್‌ರವರು ವಿಚಾರ ಮಾಡಿ ಶ್ರೀ ಚೆಲ್ಲಾರಾಮ್‌ರವರನ್ನು ಕಳುಹಿಸಿಕೊಡಿ ಎಂದು ಹೇಳಿದರು, ಅದರಂತೆ ಶ್ರೀ ಚೆಲ್ಲಾರಾಮ್ ರವರನ್ನು ಕಳುಹಿಸಿಕೊಟ್ಟೆವು. ನಾನು ಶ್ರೀ ಚೆಲ್ಲಾರಾಮ್ ರವರನ್ನು ಕಳುಹಿಸಿಕೊಡುವ ಮುಂಚೆ ಖಾಲಿ ಇರುವ ಬಿಳಿ ಹಾಳೆಯಲ್ಲಿ ಅವರ ರುಜುವನ್ನು ತೆಗೆದುಕೊಂಡಿರುತ್ತೇವೆಂದು ಹೇಳಿರುವ ವಿಷಯವು ಸುಳ್ಳು, ನಾವು ಯಾವುದೇ ರೀತಿ ಖಾಲಿ ಹಾಳೆಯಲ್ಲಿ ಸಹಿಯನ್ನು ಪಡೆದುಕೊಂಡಿರುವುದಿಲ್ಲ. PSR ಮೇಲೆ ಅವರ ಸಹಿ ತೆಗೆದುಕೊಂಡೆವು. ನಂತರ ಶ್ರೀ ಚೆನ್ನಾರಾಮ್‌ರವರನ್ನು ವಿಚಾರಮಾಡಿ ಅವರನ್ನು ಕಳುಹಿಸಿಕೊಡಿ ಎಂದು ಹೇಳಿ ಅವರಿಂದಲೂ ಸಹ PSR ಮೇಲೆ ಸಹಿ ಪಡೆದು ಕಳುಹಿಸಿ ಕೊಟ್ಟೆವು. ಮತ್ತೆ ತಂದಿದ್ದ DVR ನ್ನು ನೋಡಲಿಕ್ಕೆ ಆಗಲಿಲ್ಲ, ಯಾಕೆಂದರೆ DVR ಪಾಸ್‌ವರ್ಡ್‌ನ್ನು ಅವರು ಕೊಟ್ಟಿಲ್ಲ ಹಾಗೂ ಅವರನ್ನು ಕಳುಹಿಸಿಕೊಡುವುದರಿಂದ DVR ನ್ನು ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲವೆಂದು DVR ನ್ನು ಚಿಮ್ನಾರಾಮ್ ಜೊತೆ ವಾಪಸ್ ಕಳುಹಿಸಿಕೊಟ್ಟೆ."

ದಿನಾಂಕ 29.11.2021 ರಂದು ಆಯೋಗದ ಮುಂದೆ ದೂರುದಾರರಾದ ಶ್ರೀ ಚೆಲ್ಲಾರಾಮ್‌ರವರು ನೀಡಿರುವ ಹೇಳಿಕೆ ಕೆಳಕಂಡಂತಿದೆ:–

> "ನಾನು ಮೇಲ್ಕಂಡ ಪವಿತ್ರ ಜೂವೆಲರ್ಸ್ ಅಂಗಡಿಯನ್ನು ಸುಮಾರು 20 ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇನೆ. ದಿನಾಂಕ 7/3/2021 ರಂದು ಸುಮಾರು ಮಧ್ಯಾಹ್ನ 1.55 ಗಂಟೆಯಲ್ಲಿ ಸುಮಾರು 5 ರಿಂದ 6 ಜನ ಪೊಲೀಸರು ನಮ್ಮ ಅಂಗಡಿಗೆ ಬಂದಿದ್ದರು. ಅವರಲ್ಲಿ ಒಬ್ಬರು ಸಮವಸ್ತ್ರದಲ್ಲಿದ್ದು, ಉಳಿದವರು ಮಫ್ತಿಯಲ್ಲಿ ಇದ್ದರು. ಅವರುಗಳು ನನ್ನನ್ನು ಠಾಣೆಗೆ ಬರಬೇಕು ಎಂದು ಹೇಳಿದರು, ಅದಕ್ಕೆ ನಾನು ಏಕೆ ಬರಬೇಕು ಇಲ್ಲೇ ಕುಳಿತುಕೊಂಡು ಮಾತನಾಡೋಣ ಎಂದು ಹೇಳಿದೆನು. ಆಗ ಅವರು ಅದೆಲ್ಲಾ ನಿಮಗೆ ಬೇಕಾಗಿಲ್ಲ ನೀವು ಠಾಣೆಗೆ ಬಂದರೆ ಯಾವ ಕೇಸ್ ಎಂದು ಗೊತ್ತಾಗುತ್ತದೆ ಎಂದು ಹೇಳಿದರು. ನಾನು ಅಂಗಡಿಯಲ್ಲಿ ಒಬ್ಬನೆ ಇದ್ದ ಕಾರಣ ನಾನು ನನ್ನ ಮಗನಾದ ಲಲಿತ್‌ಕುಮಾರ್‌ಗೆ ಫೋನ್ ಮಾಡಿದೆ. ಆಗ ಪೊಲೀಸರು ನೀವು ಫೋನ್ ಮಾಡಬೇಡಿ, ಬೇಗ ಬನ್ನಿ ಎಂದು ಹೇಳಿದರು. ಅದಾದ ಮೇಲೆ ಪೊಲೀಸರು ನನ್ನ ಫೋನ್ ಅನ್ನು ಕಿತ್ತುಕೊಂಡರು. ನಾನು ಇನ್ನೊಂದು ಫೋನ್‌ನಲ್ಲಿ ಫೋನ್ ಮಾಡಿದಾಗ ಆ ಫೋನ್ ಅನ್ನು ಸಹ ಕಿತ್ತುಕೊಂಡರು. ಅವರು ನನ್ನ ಜೊತೆ ಜೋರಾಗಿ ಮಾತನಾಡಿ ನೀವು ಬರ್‌ತ್ತೀರಾ ಅಥವಾ ಇಲ್ವ, ಇಲ್ಲ ಅಂದರೆ ಎಳೆದುಕೊಂಡು ಹೋಗ್ತೀನಿ ಎಂದರು. ಆಮೇಲೆ ನನ್ನ ಮಗ ಅಂಗಡಿಗೆ ಬಂದರು, ಆಗ ನಾನು ಕೌಂಟರ್ ನಿಂದ ಹೊರಗೆ ಬಂದೆ. ಆ ಸಮಯದಲ್ಲಿ

ನಮ್ಮ ಪಕ್ಕದ ಬಟ್ಟೆ ಅಂಗಡಿಯ ಒಬ್ಬ ಹುಡುಗ ಈ ಘಟನೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುತ್ತಿದ್ದರು, ಆಗ ಆ ಹುಡುಗನ ಮೊಬೈಲ್‌ನ್ನು ಸಹ ಪೊಲೀಸರು ಕಿತ್ತುಕೊಂಡರು. ಅದಾದ ಮೇಲೆ ನನ್ನನ್ನು ಹಾಗೂ ಬಟ್ಟೆ ಅಂಗಡಿಯ ಹುಡುಗನನ್ನು ಪ್ರೈವೆಟ್ 'ಇನೋವಾ' ಕಾರ್‌ನಲ್ಲಿ ಕೂರಿಸಿಕೊಂಡು ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಉಪ್ಪಾರ ಪೇಟೆ ಪೊಲೀಸ್ ಠಾಣೆ ಒಳಗೆ ಕರೆದುಕೊಂಡು ಹೋಗಿ, ನಿನ್ನನ್ನು ಸುಮ್ಮನೆ ಕರೆದುಕೊಂಡು ಬಂದೆವು ಎಂದು ಹೇಳಿ ಖಾಲಿ ಕಾಗದದ ಮೇಲೆ ರುಜುವನ್ನು ಪಡೆದುಕೊಂಡರು. ನಂತರ ನನ್ನನ್ನು ಮತ್ತೆ ಅದೇ ಗಾಡಿಯಲ್ಲಿ ಕೂರಿಸಿಕೊಂಡು ನಮ್ಮ ಅಂಗಡಿಯ ಹತ್ತಿರ ಬಿಟ್ಟರು. ನಾನು ಅಂಗಡಿಗೆ ವಾಪಸ್ ಬಂದಾಗ ನನ್ನ ಮಗನು ಅಂಗಡಿಯಲ್ಲಿ ಇದ್ದ ಡಿವಿಆರ್‌ನ್ನು ಪೊಲೀಸರು ಕಿತ್ತುಕೊಂಡು ಹೋಗಿರುವ ಬಗ್ಗೆ ನನ್ನ ಬಳಿ ಹೇಳಿದರು. ಅದಾದ ನಂತರ ಸಾಯಂಕಾಲ ಸುಮಾರು 5 ಗಂಟೆಯಲ್ಲಿ ಶ್ರೀ ಮಂಗಲ್ ಜ್ಯೂವೆಲರ್ಸ್ ಮಾಲಿಕ ಚಿಮ್ನಾರಾಮ್ ರವರ ಜೊತೆ ನಮ್ಮ ಅಂಗಡಿಯ ಡಿವಿಆರ್‌ನ್ನು ಕಳುಹಿಸಿಕೊಟ್ಟರು. ಡಿವಿಆರ್‌ನ್ನು ನೋಡಲಾಗಿ, ಅದರಲ್ಲಿ ರೆರ್ಕಾಡಿಂಗ್ ಇರಲಿಲ್ಲ ಅದನ್ನು ಅಳಿಸಿರುತ್ತಾರೆ.

**<u>ಶ್ರೀ ನಾರಾಯಣಿ ರವರ ಹೇಳಿಕೆಯ ಮೇಲೆ ಶ್ರೀ ಚೆಲ್ಲಾರಾಮ್ ರವರ ಮರು ಹೇಳಿಕೆ:</u>**

ಶ್ರೀ ನಾರಾಯಣಿ ರವರು ಶ್ರೀ ಚೆಲ್ಲಾರಾಮ್ ರವರ ಸಹಿಯನ್ನು PSR ಮೇಲೆ ತೆಗೆದುಕೊಂಡಿದ್ದೇವೆಂದು ಹೇಳಲಾಗಿ, ಶ್ರೀ ಚೆಲ್ಲಾರಾಮ್ ರವರು ನನ್ನ ಸಹಿಯನ್ನು ರಿಜಿಸ್ಟರ್ ಮೇಲೆ ಮತ್ತು ಬಿಳಿಕಾಗದದ ಮೇಲೆ ತೆಗೆದುಕೊಂಡರು ಎಂದು ಹೇಳಿದರು

ಶ್ರೀ ಚೆಲ್ಲಾರಾಮ್ ಅವರು DVR ಬಗ್ಗೆ ಶ್ರೀ ನಾರಾಯಣಿ PSI ಅವರ ಹೇಳಿಕೆಯನ್ನು ಪ್ರಶ್ನಿಸಿ ನಮ್ಮ ಅಂಗಡಿಯ DVR ನ್ನು ನನ್ನ ಮಗ ಬಿಚ್ಚಿಕೊಂಡು ಕೊಟ್ಟಿಲ್ಲ, ಪೊಲೀಸರು ಜಬರ್ದಸ್ ಮಾಡಿ ಬಿಚ್ಚಿಕೊಂಡು ಹೋಗಿದ್ದಾರೆ ಎಂದು ಹೇಳಿದರು.

ಶ್ರೀ ನಾರಾಯಣಿ ರವರು ನನಗೆ ನೋಟೀಸ್ ಕೊಡಲು ಬಂದಾಗ ನಾನು ತಿರಸ್ಕರಿಸಿದೆ ಎಂದು ಹೇಳಿರುವುದು ಸುಳ್ಳು, ನನಗೆ ಯಾವ ನೋಟೀಸ್ ಕೊಟ್ಟಿಲ್ಲ.

ಶ್ರೀ ನಾರಾಯಣಿ ರವರ ಹೇಳಿಕೆಯಲ್ಲಿ ಅವರು ಮೊದಲು ನನ್ನನ್ನು ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದಾರೆಂದು ನುಡಿದಿರುತ್ತಾರೆ ಆದರೆ ನನ್ನನ್ನು ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿಲ್ಲ. ನೇರವಾಗಿ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು."

ಮುಂದುವರೆದು, ದೂರುದಾರರಾದ ಶ್ರೀ ಚೆಲ್ಲಾರಾಮ್‌ರವರು ಅವರ ಸಹಿಯನ್ನು ಖಾಲಿ ಹಾಳೆಯ ಮೇಲೆ ಪಡೆದಿರುತ್ತಾರೆಂದು ಅಪಾದಿಸಿದ್ದು, ಅದನ್ನು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ನಾರಾಯಣಿರವರು ನಿರಾಕರಿಸಿರುತ್ತಾರೆ. ಆದ್ದರಿಂದ ದಿನಾಂಕ 07.03.2021ರ ಘಟನೆಯ ಬಗ್ಗೆ ಸಿಸಿ ಟಿವಿ ಫೂಟೇಜ್ ಅನ್ನು ಪಡೆದುಕೊಂಡು ವರದಿ ನೀಡುವಂತೆ ಆಯೋಗದ ಡಿ.ವೈ.ಎಸ್.ಪಿ. ಶ್ರೀ ಮಂಜುನಾಥ್ ರವರಿಗೆ ಸೂಚಿಸಿದ್ದು, ದಿನಾಂಕ: 18.12.2021 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯು ಈ ಕೆಳಕಂಡಂತಿದೆ:–

"...ದಿನಾಂಕ 03.12.2021 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಉಪ್ಪಾರಪೇಟೆ ಪೊಲೀಸ್ ಠಾಣೆ, ಬೆಂಗಳೂರು ನಗರ ರವರಿಗೆ ದಿನಾಂಕ 07.03.2021 ರಂದು ಮಧ್ಯಹ್ನಾ 12–00 ಗಂಟೆಯಿಂದ ಸಂಜೆ7–00 ಗಂಟೆಯವರೆಗಿನ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಒದಗಿಸುವಂತೆ ಸೂಚಿಸಿದ್ದು, ಸದರಿಯವರು ಈ ಬಗ್ಗೆ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಈಗ್ಗೆ 05 ವರ್ಷಗಳ ಹಿಂದೆ ಇಲಾಖಾ ವತಿಯಿಂದ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಈ ಸಿಸಿ ಕ್ಯಾಮೆರಾಗಳ ನಿರ್ವಹಣೆಯ ಎ.ಎಂ.ಸಿ. ಖಾಸಗಿ ಕಂಪನಿಗೆ ಮುಕ್ತಾಯಗೊಂಡಿರುವುದರಿಂದ, ನಂತರ ನವೀಕರಿಸದ ಕಾರಣ ಈಗ್ಗೆ ಸುಮಾರು 02 ವರ್ಷಗಳಿಂದ ಠಾಣೆಯಲ್ಲಿ ಅಳವಡಿಸಿರು ಸಿಸಿ ಕ್ಯಾಮೆರಾಗಳು ಸ್ಥಗಿತಗೊಂಡಿರುತ್ತವೆ. ಆದ ಕಾರಣ ದೃಶ್ಯಾವಳಿಗಳು ಲಭ್ಯವಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ."

ದೂರು, ಆರಕ್ಷಕ ಮಹಾ ನಿರೀಕ್ಷಕರವರ ವರದಿ, ಅಭಿಪ್ರಾಯ, ಹೇಳಿಕೆಗಳು, ಡಿ.ವೈ.ಎಸ್.ಪಿ.ರವರ ವರದಿಯನ್ನು ಪರಿಶೀಲಿಸಲಾಗಿ, ದಿನಾಂಕ 07.03.2021 ರಂದು ಮಧ್ಯಾಹ್ನ 1:55 ಗಂಟೆಯ ಸುಮಾರಿಗೆ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ ಹಾಗೂ ಸಿಬ್ಬಂದಿಗಳು, ದೂರುದಾರರ ಅಂಗಡಿಗೆ ಭೇಟಿ ನೀಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಏರುಧ್ವನಿಯಲ್ಲಿ ಮಾತನಾಡಿ, ಕಾರಣ ಹೇಳದೆ ದೂರುದಾರರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ಎಂದು ಹೇಳಿ ದೂರುದಾರರ, ಅವರ ಮನೆಯವರ ವಿವರಗಳನ್ನು ಹಾಗೂ ಖಾಲಿ ಹಾಳೆಯಲ್ಲಿ ಸಹಿಯನ್ನು ಪಡೆದುಕೊಂಡಿರುತ್ತಾರೆಂದು, ದೂರುದಾರರ ದೂರಿನಲ್ಲಿ ಹಾಗೂ ಅವರ ಹೇಳಿಕೆಯಲ್ಲಿ ನುಡಿದಿರುತ್ತಾರೆ. ಆದರೆ, ಅಂದಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ನಾರಾಯಣಿ (ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಐ.ಡಿ)ರವರು ದೂರುದಾರರು ನೀಡಿರುವ ದೂರನ್ನು ಹಾಗೂ ಹೇಳಿಕೆಯನ್ನು ನಿರಾಕರಿಸಿದ್ದು, ದಿನಾಂಕ 7/3/2021 ರಂದು ಠಾಣಾ ಮೊ.ಸ. 115/2020 ರ ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ ಶಬೀರ್, ಈತ ತಾನು ಕಳವು ಮಾಡಿದ ಬಂಗಾರದ ಒಡವೆಗಳ ಪೈಕಿ ಕೆಲವು ಒಡವೆಗಳನ್ನು ಮಂಗಲ್ ಜೂವೆಲರ್ಸ್ ಮತ್ತು ಕೆಲವು ಒಡವೆಗಳನ್ನು ಪವಿತ್ರ ಜೂವೆಲರ್ಸ್ ರಲ್ಲಿ ಮಾರಾಟ ಮಾಡಿರುವುದಾಗಿ ಹಾಗೂ ಅಲ್ಲಿಗೆ ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿದ ಮೇರೆಗೆ ಆತನನ್ನು ಪವಿತ್ರ ಜ್ಯುವೆಲರ್ಸ್‌ಗೆ ಕರೆದುಕೊಂಡು ಹೋಗಿ ಆರೋಪಿಯನ್ನು ಶ್ರೀ ಚೆಲ್ಲಾರಾಮ್ ರವರಿಗೆ ತೋರಿಸಿ, ಆತ ಹೇಳಿದ್ದನ್ನು ಶ್ರೀ ಚೆಲ್ಲಾರಾಮ್‌ರವರಿಗೆ ತಿಳಿಸಿದಾಗ, ಶ್ರೀ ಚೆಲ್ಲಾರಾಮ್ ರವರು "ಬಾ ಗುರು ಕೂತ್ಕೊಂಡು ಮಾತಾಡೋಣ" ಎಂದು ಹೇಳಿದ್ದು, ಏರಿಯಾದ ಎಮ್.ಎಲ್.ಎ. ಶ್ರೀ ಸತೀಶ್ ರೆಡ್ಡಿರವರಿಗೆ ಕರೆ ಮಾಡಿ ತನಗೆ ಫೋನ್ ಕೊಟ್ಟಿದ್ದು ಶ್ರೀ ಸತೀಶ್ ರೆಡ್ಡಿ ರವರು "ಅವರು ಆ ರೀತಿ ಕಳವು ಮಾಡಿರುವ ಒಡವೆಗಳನ್ನು ತೆಗೆದುಕೊಳ್ಳುವುದಿಲ್ಲ" ಎಂದು ಹೇಳಿದ್ದು, ಅದಕ್ಕೆ ತಾನು ದೂರುದಾರರು ಠಾಣೆಗೆ ಬಂದು

ಪೊಲೀಸ್ ಇನ್ಸ್‌ಪೆಕ್ಟರ್‌ರವರ ಬಳಿ ತಿಳಿಸಲಿ ಎಂದು ಹೇಳಿದೆ. ಶ್ರೀ ಚಲ್ಲಾರಾಮ್‌ರವರಿಗೆ ನೋಟಿಸ್ ಕೊಟ್ಟಿದ್ದು ಸದರಿ ನೋಟಿಸ್ ಅನ್ನು ತಿರಸ್ಕರಿಸಿರುತ್ತಾರೆ. ಆರೋಪಿಯು ಶ್ರೀ ಚೆಲ್ಲಾರಾಮ್‌ರವರ ಅಂಗಡಿಗೆ ಬಂದ್ದಿದ್ದಾರೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸಲು ಡಿ.ವಿ.ಆರ್. ಅನ್ನು ಕೇಳಿದ್ದು, ಶ್ರೀ ಚೆಲ್ಲಾರಾಮ್ ರವರ ಮಗ ಡಿ.ವಿ.ಆರ್ ಅನ್ನು ತೆಗೆದುಕೊಟ್ಟಿರುತ್ತಾರೆ. ಆ ನಂತರ ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ಶ್ರೀ ಚೆಲ್ಲಾರಾಮ್ ರವರನ್ನು ಕರೆದುಕೊಂಡು ಹೋಗುವ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ಶ್ರೀ ಚೆಲ್ಲಾರಾಮ್ ರವರು ಹೇಳಿರುವ ರೀತಿಯಲ್ಲಿ ಯಾವುದೇ ಖಾಲಿ ಹಾಳೆಯಲ್ಲಿ ರುಜುವನ್ನು ತೆಗೆದುಕೊಂಡಿರುವುದಿಲ್ಲ. ಪಿ.ಎಸ್.ಆರ್ ಮೇಲೆ ಅವರ ಸಹಿ ತೆಗೆದುಕೊಂಡಿರುತ್ತೇವೆ ಹಾಗೂ ಡಿ.ವಿ.ಆರ್. ಪಾಸ್‌ವರ್ಡ್‌ನ್ನು ಹೇಳದ ಕಾರಣ ತಂದಿದ್ದ ಡಿ.ವಿ.ಆರ್ ಅನ್ನು ನೋಡಿಲಿಕ್ಕೆ ಸಾಧ್ಯವಾಗದ ಕಾರಣ, ಹಾಗೂ ಡಿ.ವಿ.ಆರ್ ಅನ್ನು ಪರಿಶೀಲನೆ ಮಾಡಲು ಅವಶ್ಯಕತೆ ಇರುವುದಿಲ್ಲವೆಂದು ಶ್ರೀ ಚಿಮ್ನಾರಾಮ್ ರವರ ಬಳಿ ವಾಪಸ್ಸು ಕಳುಹಿಸಿರುತ್ತೇವೆಂದು ನುಡಿದಿರುತ್ತಾರೆ.

ಒಟ್ಟಾರೆಯಾಗಿ, ಮೇಲ್ಕಂಡ ವಿಚಾರಣೆಯಿಂದ ಕಂಡುಬಂದ ಅಂಶವೇನೆಂದರೇ, ಅಂದಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ನಾರಾಯಣಿ ಹಾಗೂ ಸಿಬ್ಬಂದಿಗಳು, ದೂರುದಾರರಿಗೆ ಕಲಂ 41ಎ ಸಿ.ಆರ್.ಪಿ.ಸಿ ರೀತ್ಯ ನೋಟಿಸ್ ಜಾರಿ ಮಾಡದೆ ಇದ್ದು, ದೂರುದಾರರನ್ನು ಪೊಲೀಸ್ ಠಾಣೆಗೆ ಕರೆದೊಯ್ದುದಿರುವುದು ಬಂಧನಕ್ಕೆ ಸಮವಾಗಿದೆ. ದೂರುದಾರರಿಂದ ಪಡೆದ ಡಿವಿಆರ್‌ಗೆ ಸ್ವೀಕೃತಿ ಪತ್ರವನ್ನು ನೀಡದೇ ಇರುವುದು ಹಾಗೂ ಕಲಂ 102 ಸಿ.ಆರ್.ಪಿ.ಸಿ ರೀತಿ ಕ್ರಮ ಜರುಗಿಸದೇ ಇರುವುದು ಕಂಡುಬಂದಿರುತ್ತದೆ. ಡಿವಿಆರ್ ನ್ನು ತೆಗೆದುಕೊಂಡ ಉದ್ದೇಶವು ಆರೋಪಿತ ಶ್ರೀ ಶಬಿರ್ ದೂರುದಾರರ ಅಂಗಡಿಗೆ ಬಂದಿರುತ್ತಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಆದರೆ, ಪಿಎಸ್‌ಐ ಶ್ರೀ ನಾರಾಯಣಿ ರವರು ಹೇಳಿರುವ ಪ್ರಕಾರ ದೂರುದಾರರು ಡಿವಿಆರ್ ಪಾಸ್ವರ್ಡ್ ನೀಡದೆ ಇರುವುದರಿಂದ ಡಿವಿಆರ್‌ನ್ನು ವಾಪಸ್ಸ್ ಮಾಡಿರುವುದಾಗಿ ಹೇಳಿರುವುದನ್ನು ನಂಬಲು ಸಾಧ್ಯವಿಲ್ಲ. ಸದರಿ ಪೊಲೀಸ್ ಡಿವಿಆರ್ ಬಗ್ಗೆ ವಿಚಾರಣೆ ಮಾಡಲು ಫಾರೇನಸಿಕ್ ಎಕ್ಸ್‌ಪರ್ಟ್ ರವರ ಸಹಾಯ ಪಡೆಯಬಹುದಿತ್ತು. ದೂರುದಾರರು ಆರೋಪಿಸಿದಂತೆ ಪೊಲೀಸ್ ಸಿಬ್ಬಂದಿಗಳು ತನ್ನ ಮೊಬೈಲ್‌ನ್ನು ಕಸಿದುಕೊಂಡಿರುವುದು ಹಾಗೂ ಏರುಧ್ವನಿಯಲ್ಲಿ ಮಾತನಾಡಿ ಕರೆದುಕೊಂಡು ಹೋಗಿರುವುದು ಪೊಲೀಸರ ದುರ್ನಡತೆ ಆಗಿರುತ್ತದೆ. ಆದ್ದರಿಂದ ಅಂದಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ನಾರಾಯಣಿ ಹಾಗೂ ಆ ದಿನ ಇದ್ದಂತಹ ಸಿಬ್ಬಂದಿಗಳ ಮೇಲೆ ಇಲಾಖಾ ವಿಚಾರಣೆ ನಡೆಸಲು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 17-06-2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-

(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್